**ಕೃಷಿ ವಿಶ್ವವಿದ್ಯಾನಿಲಯ, ಬೆಂಗಳೂರು**
**ಕೃಷಿ ಹವಾಮಾನ ವಿಭಾಗ, ಜಿ.ಕೆ.ವಿ.ಕೆ, ಬೆಂಗಳೂರು–65**
**ತುಮಕೂರು ಕೃಷಿ ಹವಾಮಾನ ಮುನ್ಸೂಚನೆ**

**ದಿನಾಂಕ: 08.09.20**

## ಈ ವಾರದ ಮುನ್ಸೂಚನೆ (09.09.20 ರಿಂದ 13.09.20 ವರೆಗೆ)

| ನಿಯತಾಂಕಗಳು | 09-09-20 | 10-09-20 | 11-09-20 | 12-09-20 | 13-09-20 |
|---|---|---|---|---|---|
| ಮಳೆ (ಮಿ. ಮಿ.) | 2.9 | 25.5 | 23.4 | 20.6 | 28.6 |
| ಗರಿಷ್ಠ ಉಷ್ಣಾಂಶ(ಡಿ.ಸೆ.) | 29.5 | 30 | 30 | 28 | 28.3 |
| ಕನಿಷ್ಠ ಉಷ್ಣಾಂಶ (ಡಿ.ಸೆ.) | 20.3 | 20.1 | 19.8 | 19.9 | 19.9 |
| ಮೋಡ (ಪ್ರಮಾಣ) | 7 | 8 | 8 | 8 | 8 |
| ಅರ್ದ್ರತೆ 7.20 ಬೆ (ಶೇ) | 91 | 93 | 94 | 93 | 95 |
| ಅರ್ದ್ರತೆ 2.20 ಮ (ಶೇ) | 59 | 60 | 63 | 74 | 79 |
| ಗಾಳಿಯ ವೇಗ (ಕಿ.ಮಿ/ಗಂಟೆಗೆ) | 7 | 10 | 14 | 16 | 16 |
| ಗಾಳಿಯ ದಿಕ್ಕು (ಡಿಗ್ರಿ) | 234 | 245 | 212 | 243 | 248 |

**ಭಾರತೀಯ ಹವಾಮಾನ ಇಲಾಖೆಯ ಮುನ್ಸೂಚನೆಯ ಪ್ರಕಾರ ತುಮಕೂರು ಹಾಗೂ ಸುತ್ತಮುತ್ತ ಮುಂದಿನ ಐದು ದಿನಗಳು ಮೋಡ ಕವಿದ ವಾತಾವರಣವಿದ್ದು, ಅಧಿಕ ಮಳೆಯಾಗುವ ಸಂಭವವಿದೆ, ದಿನದ ಗರಿಷ್ಠ ಉಷ್ಣಾಂಶವು 28-30°C ಮತ್ತು ಕನಿಷ್ಠ 19-20°C ಇರಲಿದೆ. ಬೆಳಗಿನ ಆರ್ದ್ರತೆ ಪ್ರಮಾಣ ಶೇ 91–95% ಇದ್ದು, ಮಧ್ಯಾಹ್ನ 59–79% ಇರುವುದು ಮತ್ತು ಗಾಳಿಯು ಗಂಟೆಗೆ ಸರಾಸರಿ 7–16 ಕಿ.ಮೀ. ವೇಗದಲ್ಲಿ ಬೀಸುವ ಸಂಭವವಿದೆ.**

ಹುಬ್ಬ ಮಳೆಯ ಕಾಲವು ಆಗಸ್ಟ್ ತಿಂಗಳ 31 ರಿಂದ ಸೆಪ್ಟೆಂಬರ್ 12 ರವರೆಗೆ ಇರುತ್ತದೆ. ಈ ನಕ್ಷತ್ರದ ಪೂರ್ವ ಒಣ ವಲಯದ ಸರಾಸರಿ ಮಳೆಯು 80.4 ಮಿ. ಮೀ. ವರೆಗೆ ಮಳೆಯಾಗುತ್ತದೆ.

### ಕೃಷಿ ಕಾರ್ಯಕ್ರಮಗಳ ಬಗ್ಗೆ ಅನುಸರಿಸಬೇಕಾದ ವಿವರ

- ಮೋಡಕವಿದ ಮತ್ತು ತುಂತುರು ಮಳೆಯ ಮುನ್ಸೂಚನೆ ಇರುವುದರಿಂದ ಕೃಷಿ ಮತ್ತು ತೋಟಗಾರಿಕೆ ಬೆಳೆಗಳಲ್ಲಿ ಸಸ್ಯ ಸಂರಕ್ಷಣೆ ಸಿಂಪಡಣೆಗಳನ್ನು ಕೆಲ ದಿನಗಳವರೆಗೆ ಮುಂದೂಡಿ.
- ಕಳೆದ ಒಂದು ತಿಂಗಳಿನಿಂದ ವಾಡಿಕೆಗಿಂತ ಕಡಿಮೆ ಮಳೆಯಾಗಿರುವುದರಿಂದ ಕೃಷಿ ಹೊಂಡದಲ್ಲಿ ಶೇಕರಣೆಯಾಗಿರುವ ನೀರನ್ನು ಉಪಯೋಗಿಸಿ ಬೆಳೆಗಳಿಗೆ ರಕ್ಷಣಾತ್ಮಕ ನೀರಾವರಿಯನ್ನು ಕೊಡುವುದು ಸೂಕ್ತ.
- ಗಾಳಿಯ ವೇಗವು ಹೆಚ್ಚಾಗಿರುವ್ವದರಿಂದ ಕೃಷಿ ಮತ್ತು ತೋಟಗಾರಿಕಾ ಬೆಳೆಗಳಲ್ಲಿ ಔಷದ ಸಿಂಪಡಣೆಯನ್ನು ಮುಂದೂಡಿ.
- ಎಲ್ಲೆಲ್ಲಿ ದೀರ್ಘಾವದಿ ಬೆಳೆಗಳು (ತೊಗರಿ ಮತ್ತು ಹರಳು) ಬಿತ್ತನೆ ಮಾಡಿದಲ್ಲಿ ಕಳೆ ನಿರ್ವಹಣೆ, ಮಣ್ಣು ಮತ್ತು ನೀರಿನ ಸಂರಕ್ಷಣೆಗೆ ಅಂತರ ಬೇಸಾಯವನ್ನು ಕೈಗೊಳ್ಳುವುದು.
- ದ್ವಿದಳ ಧಾನ್ಯ ಬೆಳೆಗಳನ್ನು ಬಿತ್ತುವ ಮುನ್ನ ಜೈವಿಕ ಗೊಬ್ಬರಗಳಾದ ರೈಜೋಬಿಯಮ್ ನಿಂದ ಬೀಜೋಪಚಾರ ಮಾಡಬೇಕು.

**ಆಗಸ್ಟ್ ತಿಂಗಳಲ್ಲಿ ಬಿತ್ತನೆ ಮಾಡಬೇಕಾದ ಬೆಳೆಗಳು: (ತೇವಾಂಶದ ಆಧಾರದ ಮೇಲೆ ಬಿತ್ತನೆ ಮಾಡಬೇಕು)**

ಏಕಬೆಳೆ ಪದ್ದತಿಯಲ್ಲಿ ಈ ಕೆಳಗಿನ ಬೆಳೆ ಮತ್ತು ತಳಿಗಳನ್ನು ಬಿತ್ತನೆ ಮಾಡಲು ಸೂಚಿಸಲಾಗಿದೆ
ತೊಗರಿ : ಟಿ.ಟಿ.ಬಿ–7, ಬಿ.ಆರ್.ಜಿ–1,2,4 ಮತ್ತು 5
ಎರಡುಬೆಳೆ ಪದ್ದತಿಯಲ್ಲಿ ಈ ಕೆಳಗಿನ ಮಧ್ಯಮ ಅವಧಿ ಮತ್ತು ಕಡಿಮೆ ಅವಧಿ ತಳಿಗಳನ್ನು ಬಿತ್ತನೆ ಮಾಡಲು ಸೂಚಿಸಲಾಗಿದೆ
ರಾಗಿ: ಜಿ.ಪಿ.ಯು–28, ಹೆಚ್.ಆರ್–911, ಜಿ.ಪಿ.ಯು–66, ಎಮ್.ಎಲ್–365, ಇಂಡಾಫ್–5, ಜಿ.ಪಿ.ಯು–45, ಕೆ.ಎಮ್.ಆರ್–204, ಜಿ.ಪಿ.ಯು–26, ಇಂಡಾಫ್–9 ಮತ್ತು ಕೆ.ಎಂ.ಆರ್–301.
ನೆಲಗಡಲೆ: ಟಿ.ಎಮ್.ವಿ–2, ಜೆ.ಎಲ್–24, ಕೆ.ಸಿ.ಜಿ–2 ಮತ್ತು6
ಶಕ್ತಿಮಾನ್ ಜೋಳದ ತಳಿಗಳಾದ ಡೆಕ್ಕನ್–103, ವಿಜಯ ಕಾಂಪೋಸಿಟ್ ಮತ್ತು ಗಂಗಾ–11
ಅಲಸಂದೆ : ಟಿ.ವಿ.ಎಕ್ಸ್–944, ಕೆ.ಬಿ.ಸಿ–1, ಕೆ.ಬಿ.ಸಿ–2, ಐ.ಟಿ–98456–1 ಮತ್ತು ಕೆ.ಎಂ–5
ಹೆಸರು :ಪಿ.ಎಸ್–16, ಪಿ.ಡಿ.ಎಮ್–84, 178 , ಉದ್ದು: ಕರಗಾವ್–3, ಟಿ–9, ರಶ್ಮಿ
ನವಣೆ: ಆರ್.ಎಸ್–118, ಕೆ–221–1,ಪಿ.ಎಸ್–4, ಎಸ್.ಐ.ಎ–326
ಸಾಮೆ: ಸಿ.ಒ–2, ಪಿ,ಆರ್.ಸಿ–3,ಒ.ಎಲ್.ಎಂ–203
ಹಾರಕ: ಪಿ.ಎಸ್.ಸಿ–1, ಜೆ.ಎನ್.ಕೆ–364, ಆರ್.ಬಿ.ಕೆ–155, ಜಿ.ಪಿ.ಯು.ಕೆ–3

**ಜಾನುವಾರು:** ಜಾನುವಾರು, ರೇಷ್ಮೆ ಹಾಗೂ ಕೋಳಿ ಸಾಕಣೆ ಕೊಠಡಿಯ ಉಷ್ಣಾಂಶದ ಸ್ಥಿರತೆಯನ್ನು ಕಾಪಾಡಿಕೊಳ್ಳುವುದು.
**ಸಸ್ಯ ಸಂರಕ್ಷಣೆ:** ಗಾಳಿಯ ವೇಗವು ಹೆಚ್ಚಾಗಿರುವುದರಿಂದ ಕೃಷಿ ಮತ್ತು ತೋಟಗಾರಿಕಾ ಬೆಳೆಗಳಲ್ಲಿ ಔಷದ ಸಿಂಪಡಣೆಯನ್ನು ಮುಂದೂಡಿ.

**ನೋಡಲ್ ಅಧಿಕಾರಿ:**

ಕೃಷಿ ಹವಾಮಾನ ವಿಭಾಗ
**ಕೃಷಿ ವಿಶ್ವವಿದ್ಯಾನಿಲಯ,**
**ಬೆಂಗಳೂರು**